ಮೂ. ದಾ. ನಂ. 33/18

ಪಿ.ಡಬ್ಲ್ಯು. 1

(ಇಂದು ದಿನಾಂಕಃ 09-01-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ವಿ.ಎ.ಟಿ. ವಕೀಲರಿಂದಃ**

ನಿ.ಪಿ.9 ದಾಖಲೆಯನ್ನು ಮೂ.ದಾ. ನಂ. 235/2014 ರಲ್ಲಿ ಕಾಣಿಸಿದ ಪ್ರತಿವಾದಿ ಅಬ್ದುಲ್ ರಜಾಕ್ ಹಾಗೂ ನಾನು ಅಂಗಡಿಯನ್ನು ನಡೆಸುತ್ತಿದ್ದು ಆ ಅಂಗಡಿಗೆ ಸಂಬಂಧಪಟ್ಟ ತೀರ್ಪು ಆಗಿರುತ್ತದೆ. ಆ ಕಾರಣ ಹಾಜರು ಮಾಡಿರುತ್ತೇನೆ. ಮೂ.ದಾ. ನಂ. 235/2014 ರ ದಾವಾ ಸ್ವತ್ತು ನಂ. 5 ಜಿ/2 ಆಗಿರುತ್ತದೆ. ಅದರ ಸಿ.ಟಿ.ಎಸ್. ನಂಬರ್ ನೆನಪಿಲ್ಲ. ಅಂಗಡಿಯ ನಂಬರ್ ನೆನಪಿಲ್ಲ, ಆದರೆ ಅದು ಅಲ್ಯುಮಿನಿಯಂ ಅಂಗಡಿಯಾಗಿತ್ತು. ಮೂ.ದಾ. ನಂ. 235/2014 ರ ದಾವಾ ಸರ್ವೆ ನಂಬರ್ ಮತ್ತು ಈ ದಾವೆಯ ಸರ್ವೆ ನಂಬರ್ ಬೇರೆ ಬೇರೆಯಾಗಿರುತ್ತದೆ ಎಂದರೆ ಸರಿ. ಈ ದಾವಾ ಸರ್ವೆ ನಂಬರ್ ಮೂ.ದಾ. ನಂ. 235/2014 ರ ತೀರ್ಪಿನಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಮೂ.ದಾ. ನಂ. 235/2014 ರ ದಾವಾ ಸ್ವತ್ತಿಗೆ ಮತ್ತು ಈ ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮೂ.ದಾ. ನಂ. 235/2014 ರ ಪ್ರತಿವಾದಿ ಅಬ್ದುಲ್ ರಜಾಕ್ ನನ್ನ ಚಿಕ್ಕಪ್ಪ. ಮೂ.ದಾ. ನಂ. 235/2014 ರಲ್ಲಿ ನಿಸಾರ್ ಅಹಮ್ಮದ್ ಉಸ್ಮಾನ್ ಮುಮಿನ್ ರವರು ಅರ್ಧ ಹಕ್ಕಿಗೆ adverse possession ಕೇಳಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರಿದು ನಾನು ಪೂರ್ತಿ ಆಸ್ತಿ ಹಕ್ಕು ಕೇಳಿದ್ದೆ ಎನ್ನುವರು. ಮೂ.ದಾ. ನಂ. 235/2014 ರಲ್ಲಿ ನನಗೆ ಪೂರ್ತಿ ಆಸ್ತಿಯಲ್ಲಿ ಹಕ್ಕು ಕೊಟ್ಟು ತೀರ್ಪು ಆಗಿರುತ್ತದೆ. ಸಾಕ್ಷಿ ಮುಂದುವರಿದು ಮೂ.ದಾ. ನಂ. 235/2014 ರಲ್ಲಿ ಪೂರ್ತಿ ಆಸ್ತಿಗೆ ಹಕ್ಕು ಕೊಟ್ಟಿದ್ದು ನಂತರ ಅರ್ಧ ಆಸ್ತಿಗೆ ಹಕ್ಕು ಕೊಟ್ಟು ಆದೇಶ ಆಗಿತ್ತು ಎನ್ನುವರು. ಮೂ.ದಾ. ನಂ. 235/2014 ಮತ್ತು ಈ ದಾವೆಯ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಆ ದಾವೆಯ ಅಂಗಡಿಯನ್ನು ನಡೆಸಿ ಅದರ ಆದಾಯದಿಂದ ಈ ದಾವೆಯ ಆಸ್ತಿಯನ್ನು ಖರೀದಿ ಮಾಡಿದ್ದೇನೆ ಎನ್ನುವರು. ಈ ವಿಷಯ ನನಗೆ ದಾವೆ ಹಾಕುವ ಮೊದಲೇ ಗೊತ್ತಿತ್ತು ಎನ್ನುವರು. ಈಗ

ಮೂ. ದಾ. ನಂ. 33/18
ಪಿ.ಡಬ್ಲ್ಯು. 1

ಹೇಳಿದ ವಿಷಯವನ್ನು ಈ ದಾವೆಯಲ್ಲಿ ಎಲ್ಲಿಯೂ ನಮೂದು ಮಾಡಿಲ್ಲ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಮೂ.ದಾ. ನಂ. 235/2014 ಅಂಗಡಿಯ ಆದಾಯದಿಂದ ಈ ಕೇಸಿನ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರು ಮಾಡಿಲ್ಲ. ದಾವಾಸ್ತಿಯನ್ನು ಅಬ್ದುಲ್ ರಜಾಕ್ ಅಹಮ್ಮದ್ ಮುಮಿನ್ ಹಾಗೂ ಕುಲುಸುಂಬಿ ಅಬ್ದುಲ್ ಲತೀಫ್ ಮುಮಿನ್ ಇವರ ಹೆಸರಿನಲ್ಲಿ ಇದ್ದ ಜಾಗವನ್ನು ಈ ದಾವೆಯ ಪ್ರತಿವಾದಿ ಅಬುಬಕ್ಕರ್ ಹರೂನ್ ಸೈಯದ್ ಖರೀದಿ ಮಾಡಿದ್ದು ಅವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಈ ದಾವೆಯನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಿ.ಪಿ.9 ತೀರ್ಪಿಗೆ ಮತ್ತು ಈ ದಾವೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ